<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ</u>

**ಎಸ್.ಸಿ. ನಂಬರ್ಃ 78/2021**

ಪ್ರಾಸಾಃ 5 ಚಾಸಾಃ 12
ದಿನಾಂಕಃ 25-06-2025

<u>ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ- ಮುನಿವೆಂಕಟಪ್ಪ |
| ತಂದೆಯ ಹೆಸರು | ಃ- ಮುನಿಶಾಮಪ್ಪ |
| ವಯಸ್ಸು | ಃ- 55 ವರ್ಷ |
| ಉದ್ಯೋಗ | ಃ- ವ್ಯವಸಾಯ |
| ವಾಸ ಸ್ಥಳ | ಃ- ಕಸಬಾ ಮಾರೇನಹಳ್ಳಿ |

<u>ಶ್ರೀ ಎಂ.ಎಸ್.ಜಿ ವಕೀಲರನ್ನು ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಲು ನೇಮಕ ಮಾಡಿದೆ.</u>

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಶ್ರೀ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

ಆರೋಪಿಗಳು ಗೊತ್ತು. ಚಾಸಾ-1 ನನ್ನ ತಮ್ಮನ ಹೆಂಡತಿ. ಮೃತ ಮಮತ ಆಕೆಯ ಮಗಳು, ಅವಳು ಪ್ರಾಪ್ತ ವಯಸ್ಕಳಾಗಿದ್ದಳು.

ಆಕೆ ಹಗ್ಗದಿಂದ ದಿನಾಂಕಃ 11-05-2020 ರಂದು ಅವರ ಮನೆಯಲ್ಲಿಯೇ ಮದ್ಯಾಹ್ನ 12-45 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನಗೆ ಫೋನಿನಲ್ಲಿ ವಿಷಯ ತಿಳಿಸಿದರು. ಮಮತ ಮತ್ತು 1 ನೇ ಆರೋಪಿ ಪ್ರೀತಿ ಮಾಡುತ್ತಿದ್ದರು. ನಾವು ಆಗ ಅವಳಿಗೆ ಬೇರೆ ಕಡೆ ಸಂಬಂಧ ನೋಡುತ್ತಿದ್ದೆವು. ಮಮತಾ 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿದಳು. ಆಕೆ ಫೋನ್ ಮಾಡಿ ಕೇಳಿದಾಗ 1 ನೇ ಆರೋಪಿ ಪ್ರೀತಿ ಮಾಡುತ್ತಿರುವುದಾಗಿ ಒಪ್ಪಿಕೊಂಡ. 1 ನೇ ಆರೋಪಿ ನಮ್ಮನ್ನು ಖುದ್ದು ಭೇಟಿಯಾಗುವುದಾಗಿ ಒಂದು ತಿಂಗಳು ಕಾಲಾವಕಾಶ ಕೇಳಿದ. ನಂತರ 1 ನೇ ಆರೋಪಿ, 3 ನೇ ಆರೋಪಿ, 1 ನೇ ಆರೋಪಿಯ ಮಾವ ನಾಗರಾಜ್, ವೇಣುಗೋಪಾಲ್ ನಮ್ಮ ಮನೆಗೆ ಬಂದರು.

ಅವರು 1 ನೇ ಆರೋಪಿ ಮದುವೆಯಾಗಲು ಸಿದ್ಧ ಇದ್ದಾನೆ, ಆದರೆ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಕೊಟ್ಟರೇ ಮಾತ್ರ ಮದುವೆಯಾಗುವುದಾಗಿ ಹೇಳಿದರು. ಆ ದಿನ 2 ನೇ ಆರೋಪಿ ಬಂದಿರಲಿಲ್ಲ, ಆಕೆಯ ಜೊತೆ ಮಾತನಾಡಿ ಪುನಃ ಫೋನ್ ಮಾಡುವುದಾಗಿ ತಿಳಿಸಿ ಹೋದರು. ಅದೇ ದಿನ ರಾತ್ರಿ ಆಕೆಯ ಜೊತೆ ಫೋನ್ ಮಾಡಿಸಿದಾಗಲೂ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಮತ್ತು ಛತ್ರದಲ್ಲಿ ಮದುವೆ ಮಾಡಿಕೊಟ್ಟರೇ ಮಾತ್ರ ಮದುವೆ ನೆರವೇರುತ್ತದೆ ಎಂದು, ಇಲ್ಲವಾದರೆ ಮಗಳಿಗೆ ಎಲ್ಲಾದರೂ ಬಿದ್ದು ಸಾಯಿ ಎಂದು ಹೇಳಿದ್ದಾನೆ. ಅದೇ ಕಾರಣಕ್ಕೆ ಆಕೆ ಬೇಜಾರು ಮಾಡಿಕೊಂಡು, 1 ನೇ ಆರೋಪಿ ಮೋಸ ಮಾಡಿದ ಎಂದು ಜಿಗುಪ್ಸೆಗೊಂಡು, ಪತ್ರ ಬರೆದು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 1 ನೇ ಆರೋಪಿಗೆ ವರದಕ್ಷಿಣೆ ಒತ್ತಾಯ ಮಾಡುವಂತೆ ಮೇಲೆ ಹೇಳಿದ ಮೂರು ಜನ ದುಷ್ಪ್ರೇರಣೆ ಮಾಡಿದ್ದಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಕೋದಂಡಪ್ಪ ವಕೀಲರಿಂದಃ

1 ನೇ ಆರೋಪಿಯನ್ನು ಹೊರತು ಪಡಿಸಿ ಬೇರೆ ಹುಡುಗನ ಜೊತೆ ಮಮತಳ ಮದುವೆ ಮಾಡಬೇಕೆಂದು ನಾವು ಮನೆಯವರು ತೀರ್ಮಾನ ಮಾಡಿದ್ದೇವು ಎಂದರೆ ಸರಿ. ಆದರೆ ಸದರಿ ಮದುವೆಗೆ ಮಮತ ಒಪ್ಪಿಕೊಳ್ಳಲಿಲ್ಲ ಎಂದರೆ ಸರಿ. ಅದೇ ರೀತಿ ಆಕೆ 1 ನೇ ಆರೋಪಿಯನ್ನೇ ಮದುವೆಯಾಗುವುದಾಗಿ ಹೇಳಿದ್ದಳು ಎಂದರೆ ಸರಿ, ಮಮತಾ ನಾವು 1 ನೇ ಆರೋಪಿಯೊಂದಿಗೆ ಮದುವೆ ಮಾಡಲು ನಿರಾಕರಿಸಿದ ಕಾರಣ, ಜೀವನದಲ್ಲಿ ಜಿಗುಪ್ಸೆಗೊಂಡು ಸ್ವತಃ ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿ (ಎರಡು ಬಾರಿ ಕೇಳಿದಾಗಲೂ ಅದೇ ರೀತಿ ಉತ್ತರಿಸಿದ್ದಾರೆ). ಮಮತಾಳ ಆತ್ಮಹತ್ಯೆಗೂ 1 ನೇ ಆರೋಪಿಗೂ ನೇರ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ

ಎಸ್.ಸಿ. ನಂಬರ್ಃ 78/2021

ಪ್ರಾಸಾಃ 6 ಚಾಸಾಃ 14
ದಿನಾಂಕಃ 25-06-2025

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರು ಃ- ಪದ್ಮಮ್ಮ
ಗಂಡನ ಹೆಸರು ಃ- ಮುನಿವೆಂಕಟಪ್ಪ
ವಯಸ್ಸು ಃ- 47 ವರ್ಷ
ಉದ್ಯೋಗ ಃ- ಗೃಹಿಣಿ
ವಾಸ ಸ್ಥಳ ಃ- ಕಸಬಾ ಮಾರೇನಹಳ್ಳಿ

ಶ್ರೀ ಎಂ.ಎಸ್.ಜಿ ವಕೀಲರನ್ನು ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಲು ನೇಮಕ ಮಾಡಿದೆ.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಶ್ರೀ ಮಾಧವ ಪದ್ಮನಾಭ ಗಾವಂಕರ್ ರವರಿಂದಃ

ಆರೋಪಿಗಳು ಗೊತ್ತು. ಚಾಸಾ-1 ನನ್ನ ಮೈದುನನ ಹೆಂಡತಿ. ಮೃತ ಮಮತ ಆಕೆಯ ಮಗಳು, ಅವಳು ಪ್ರಾಪ್ತ ವಯಸ್ಕಳಾಗಿದ್ದಳು.

ಆಕೆ ಹಗ್ಗದಿಂದ ದಿನಾಂಕಃ 11-05-2020 ರಂದು ಅವರ ಮನೆಯಲ್ಲಿಯೇ ಮದ್ಯಾಹ್ನ 12-45 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನಗೆ ಫೋನಿನಲ್ಲಿ ವಿಷಯ ತಿಳಿಸಿದರು. ಮಮತ ಮತ್ತು 1 ನೇ ಆರೋಪಿ ಪ್ರೀತಿ ಮಾಡುತ್ತಿದ್ದರು. ನಾವು ಆಗ ಅವಳಿಗೆ ಬೇರೆ ಕಡೆ ಸಂಬಂಧ ನೋಡುತ್ತಿದ್ದೆವು. ಮಮತಾ 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿದಳು. ಆಕೆ ಫೋನ್ ಮಾಡಿ ಕೇಳಿದಾಗ 1 ನೇ ಆರೋಪಿ ಪ್ರೀತಿ ಮಾಡುತ್ತಿರುವುದಾಗಿ ಒಪ್ಪಿಕೊಂಡ. 1 ನೇ ಆರೋಪಿ ನಮ್ಮನ್ನು ಖುದ್ದು ಭೇಟಿಯಾಗುವುದಾಗಿ ಒಂದು ತಿಂಗಳು ಕಾಲಾವಕಾಶ ಕೇಳಿದ. ನಂತರ 1 ನೇ ಆರೋಪಿ, 3 ನೇ ಆರೋಪಿ, 1 ನೇ ಆರೋಪಿಯ ಮಾವ ನಾಗರಾಜ್, ವೇಣುಗೋಪಾಲ್ ನಮ್ಮ ಮನೆಗೆ ಬಂದರು.

ಅವರು 1 ನೇ ಆರೋಪಿ ಮದುವೆಯಾಗಲು ಸಿದ್ಧ ಇದ್ದಾನೆ, ಆದರೆ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಕೊಟ್ಟರೇ ಮಾತ್ರ ಮದುವೆಯಾಗುವುದಾಗಿ ಹೇಳಿದರು. ಆ ದಿನ 2 ನೇ ಆರೋಪಿ ಬಂದಿರಲಿಲ್ಲ, ಆಕೆಯ ಜೊತೆ ಮಾತನಾಡಿ ಪುನಃ ಫೋನ್ ಮಾಡುವುದಾಗಿ ತಿಳಿಸಿ ಹೋದರು. ಅದೇ ದಿನ ರಾತ್ರಿ ಆಕೆಯ ಜೊತೆ ಫೋನ್ ಮಾಡಿಸಿದಾಗಲೂ ಕಾಲು ಕೆಜಿ ಬಂಗಾರ, ಎರಡು ಲಕ್ಷ ಹಣ ಮತ್ತು ಛತ್ರದಲ್ಲಿ ಮದುವೆ ಮಾಡಿಕೊಟ್ಟರೇ ಮಾತ್ರ ಮದುವೆ ನೆರವೇರುತ್ತದೆ ಎಂದು, ಇಲ್ಲವಾದರೆ ಮಗಳಿಗೆ ಎಲ್ಲಾದರೂ ಬಿದ್ದು ಸಾಯಿ ಎಂದು ಹೇಳಿದ್ದಾನೆ. ಅದೇ ಕಾರಣಕ್ಕೆ ಆಕೆ ಬೇಜಾರು ಮಾಡಿಕೊಂಡು, 1 ನೇ ಆರೋಪಿ ಮೋಸ ಮಾಡಿದ ಎಂದು ಜಿಗುಪ್ಸೆಗೊಂಡು, ಪತ್ರ ಬರೆದು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 1 ನೇ ಆರೋಪಿಗೆ ವರದಕ್ಷಿಣೆ ಒತ್ತಾಯ ಮಾಡುವಂತೆ ಮೇಲೆ ಹೇಳಿದ ಮೂರು ಜನ ದುಷ್ಪ್ರೇರಣೆ ಮಾಡಿದ್ದಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಕೋದಂಡಪ್ಪ ವಕೀಲರಿಂದಃ

1 ನೇ ಆರೋಪಿಯನ್ನು ಹೊರತು ಪಡಿಸಿ ಬೇರೆ ಹುಡುಗನ ಜೊತೆ ಮಮತಳ ಮದುವೆ ಮಾಡಬೇಕೆಂದು ನಾವು ಮನೆಯವರು ತೀರ್ಮಾನ ಮಾಡಿದ್ದೇವು ಎಂದರೆ ಸರಿ. ಆದರೆ ಸದರಿ ಮದುವೆಗೆ ಮಮತ ಒಪ್ಪಿಕೊಳ್ಳಲಿಲ್ಲ ಎಂದರೆ ಸರಿ. ಅದೇ ರೀತಿ ಆಕೆ 1 ನೇ ಆರೋಪಿಯನ್ನೇ ಮದುವೆಯಾಗುವುದಾಗಿ ಹೇಳಿದ್ದಳು ಎಂದರೆ ಸರಿ, ಮಮತಾ ನಾವು 1 ನೇ ಆರೋಪಿಯೊಂದಿಗೆ ಮದುವೆ ಮಾಡಲು ನಿರಾಕರಿಸಿದ ಕಾರಣ, ಜೀವನದಲ್ಲಿ ಜಿಗುಪ್ಸೆಗೊಂಡು ಸ್ವತಃ ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ.. ಮಮತಾಳ ಆತ್ಮಹತ್ಯೆಗೂ 1 ನೇ ಆರೋಪಿಗೂ ನೇರ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಏನು ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

sd/-

**(ಮಂಜುನಾಥ ಜಿ.ಎ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.